ಶ್ರೀ ಎಸ್. ಬಂಗಾರಪ್ಪ, (ಮುಖ್ಯ ಮಂತ್ರಿಗಳು):–

ಅ) ಕೈಗಾರಿಕಾ ನಿರ್ದೇಶನಾಲಯದಲ್ಲಿ ರೋಗಗ್ರಸ್ತ ಉದ್ದಿಮೆಗಳ ಪುನರುಜ್ಜೀವನ ಘಟಕ ಸ್ಥಾಪಿತವಾಗಿಲ್ಲ. ಈ ಬಗ್ಗೆ ಕೈಗಾರಿಕಾ ನಿರ್ದೇಶನಾಲಯದಿಂದ ಪ್ರಸ್ತಾವನೆಯನ್ನು ನಿರೀಕ್ಷಿಸಲಾಗಿದೆ. ಆದರೆ ಸರ್ಕಾರದ ಮಟ್ಟದಲ್ಲಿ ಒಂದು ವಿಶೇಷ ಘಟಕವನ್ನು ರೋಗಗ್ರಸ್ತ ಸಕ್ಕರೆ ಮತ್ತು ಹತ್ತಿ ಗಿರಣಿಗಳ ಪುನರುಜ್ಜೀವನ ಉಸ್ತುವಾರಿ ಬಗ್ಗೆ ನವೆಂಬರ್ 1989ರಲ್ಲಿ ಸ್ಥಾಪಿಸಲಾಗಿದೆ.

ಆ) ಸರ್ಕಾರದ ಮಟ್ಟದಲ್ಲಿ ಸ್ಥಾಪಿಸಲಾಗಿರುವ ಘಟಕವನ್ನು ಒಂದು ವರ್ಷದ ಅವಧಿಗೆ ಸ್ಥಾಪಿಸಲಾಗಿದೆ.

ಇ) ಈ ಘಟಕವು ಸಹಕಾರ ವಲಯದಲ್ಲಿನ ಸಕ್ಕರೆ ಹಾಗೂ ಹತ್ತಿ ಗಿರಣಿಗಳು ರೋಗಗ್ರಸ್ತವಾಗಲು ಕಾರಣಗಳೇನೆಂದು ಗುರ್ತಿಸಲು ಅಧ್ಯಯನ ಮಾಡುತ್ತಿದೆ. ಇದುವರೆವಿಗೂ ಯಾವ ವರದಿಯನ್ನು ನೀಡಿಲ್ಲ.

ಬೆಂಗಳೂರು ವಿಶ್ವವಿದ್ಯಾನಿಲಯದ ಬಾಹ್ಯ ಶಿಕ್ಷಣದ ಬಗ್ಗೆ

411. ಶ್ರೀ ಪಿ. ಬಸವಾರಾಜ್ (ಬ್ರಹ್ಮಾವರ):– ಮಾನ್ಯ ಶಿಕ್ಷಣ ಮತ್ತು ಸಂಸದೀಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಬಾಹ್ಯ ವಿದ್ಯಾರ್ಥಿಗಳಿಗೆ ಅಂಚೆ ತೆರಪಿನ ಶಿಕ್ಷಣ ನೀಡಲಾಗುತ್ತಿದೆಯೇ?

ಆ) ವಿಶ್ವವಿದ್ಯಾಲಯದಲ್ಲಿ ಈ ರೀತಿಯ ಶಿಕ್ಷಣಕ್ಕೆ ಗಮನಾರ್ಹವಾಗಿ ಶುಲ್ಕ ವಸೂಲಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಇದರಿಂದ ಅನೇಕ ಶಿಕ್ಷಣಾಕಾಂಕ್ಷಿಗಳಿಗೆ ಅದರಲ್ಲೂ ಬಡ ವಿದ್ಯಾರ್ಥಿಗಳಿಗೆ ಗಮನಾರ್ಹವಾಗಿ ಆರ್ಥಿಕ ತೊಂದರೆ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಹಾಗಿದ್ದಲ್ಲಿ, ಈ ಬಗ್ಗೆ ಯಾವ ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಎಂ. ವೀರಪ್ಪ ಮೊಯ್ಲಿ (ಶಿಕ್ಷಣ ಮಂತ್ರಿಗಳು):–

ಅ) ಹೌದು.

ಆ) ಮುದ್ರಣ, ಲೇಖನ ಸಾಮಗ್ರಿಗಳು, ಹಾಗೂ ಇತರೆ ಬಾಬ್ತುಗಳ ಮೇಲೆ ಬೆಲೆ ಹೆಚ್ಚಿರುವುದನ್ನು ಗಮನದಲ್ಲಿಟ್ಟುಕೊಂಡು ವಿಶ್ವವಿದ್ಯಾನಿಲಯವು ಶುಲ್ಕವನ್ನು 1990–91ನೇ ಸಾಲಿನಿಂದ ಪರಿಷ್ಕರಿಸಲಾಗಿದೆ.

ಇ) ಇಲ್ಲ

ಉಡುಪಿ ತಾಲ್ಲೂಕಿನ ಪಾರಂಪಳ್ಳಿಯ ಹತ್ತಿರ ಕೋಡಿ ಹೊಳೆಗೆ ಸೇತುವೆ ನಿರ್ಮಾಣದ ಬಗ್ಗೆ

410. ಶ್ರೀ ಪಿ. ಬಸವರಾಜ್ (ಬ್ರಹ್ಮಾವರ)– ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಉಡುಪಿ ತಾಲ್ಲೂಕಿನ ಸಾಲಿಗ್ರಾಮದ ಪಾರಂಪಳ್ಳಿಯಿಂದ ಕೋಡಿ ಹೊಳೆಗೆ ಸೇತುವೆ ನಿರ್ಮಾಣ ಮಾಡುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ, ನಿರ್ಮಾಣ ಕಾರ್ಯ ಯಾವಾಗ ಪ್ರಾರಂಭವಾಗಿದೆ? ಹಾಗೂ ವಿಳಂಬವಾಗಲು ಕಾರಣವೇನು?

ಆ) ಈ ಸೇತುವೆ ನಿರ್ಮಾಣ ಕಾರ್ಯಕ್ಕೆ ಅಂದಾಜು ಮಾಡಿದ ವೆಚ್ಚ ಎಷ್ಟು? ಈವರೆಗೆ ತಗಲಿದ ವೆಚ್ಚ ಎಷ್ಟು ಹಾಗೂ ಮುಂದೆ ತಗಲಬಹುದಾದ ವೆಚ್ಚ ಎಷ್ಟು?

ಇ) ಈ ಸೇತುವೆ ನಿರ್ಮಾಣ ಕಾರ್ಯಯಾವಾಗ ಪೂರ್ಣಗೊಳ್ಳುವುದು?

ಶ್ರೀ ಎಸ್. ಬಂಗಾರಪ್ಪ, (ಮುಖ್ಯ ಮಂತ್ರಿಗಳು):–

ಅ) ಬಂದಿದೆ. ನಿರ್ಮಾಣ ಕಾರ್ಯ ಅಕ್ಟೋಬರ್ 1986ರಲ್ಲಿ ಪ್ರಾರಂಭಿಸಲಾಗಿದೆ. ಕಳೆದ ವಾರ್ಷಿಕ ಸಾಲುಗಳಲ್ಲಿ ಸಾಕಷ್ಟು ಅನುದಾನವು ಬಿಡುಗಡೆಯಾಗದಿರುವುದು ಹಾಗೂ ಸಿಮೆಂಟ್ ಮತ್ತು ಕಬ್ಬಿಣ ಸಾಮಗ್ರಿಗಳು ಸಕಾಲಕ್ಕೆ ದೊರಕದೇ ಇರುವುದು ವಿಳಂಬಕ್ಕೆ ಕಾರಣಗಳಾಗಿವೆ.

ಆ) ಅಂದಾಜು ವೆಚ್ಚ : 9.50 ಲಕ್ಷ ರೂ.ಗಳು
ಅಕ್ಟೋಬರ್ 90 ವರೆಗೆ
ಆಗಿರುವ ವೆಚ್ಚ : 11.19 ಲಕ್ಷ ರೂ.ಗಳು
ಮುಂದೆ ತಗಲಬಹುದಾದ ವೆಚ್ಚ : 2.50 ಲಕ್ಷ ರೂ.ಗಳು

ಇ) ಈ ಸಾಲಿನಲ್ಲಿಯೇ (90–91) ಪೂರ್ಣಗೊಳಿಸುವ ಕಾರ್ಯಕ್ರಮವಿದೆ.

ನೆಲಮಂಗಲ ತಾಲ್ಲೂಕು ತ್ಯಾಮಗೊಂಡ್ಲು–ಬೇಗೂರು ರಸ್ತೆಯಲ್ಲಿರುವ ಸೇತುವೆ ರಿಪೇರಿ ಬಗ್ಗೆ

376. ಶ್ರೀ ಸಿ. ವೀರಭದ್ರಯ್ಯ (ಕೊರಟಗೆರೆ):– ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನೆಲಮಂಗಲ ತಾಲ್ಲೂಕು, ತ್ಯಾಮಗೊಂಡ್ಲುನಿಂದ ಬೇಗೂರಿಗೆ ಹೋಗುವ ರಸ್ತೆಯಲ್ಲಿ (ಕಳಲುಘಟ್ಟ ಹತ್ತಿರ) ಸೇತುವೆ ರಿಪೇರಿಯಲ್ಲಿದೆ ಎಂದು ಸೇತುವೆ ಬಳಿ ಕಳೆದ ನಾಲ್ಕು ವರ್ಷಗಳಿಂದ ನಾಮಫಲಕ ಹಾಕಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಸೇತುವೆ ಕೆಲಸ ತ್ವರಿತವಾಗಿ ದುರಸ್ತಿ ಮಾಡಿಸಲು ಸರ್ಕಾರದವರು ತೆಗೆದುಕೊಂಡ ಕ್ರಮವೇನು?

ಶ್ರೀ ಎಸ್. ಬಂಗಾರಪ್ಪ, (ಮುಖ್ಯಮಂತ್ರಿಗಳು):–

ಅ) ವಾಹನಗಳು ನಿಧಾನವಾಗಿ ಚಲಿಸಲು ಸೂಚನಾ ನಾಮಫಲಕವನ್ನು ಮೇ 1989ರಲ್ಲಿ ಹಾಕಲಾಗಿದೆ.

ಆ) ಈಗ ಇರುವ ಕಲ್ಲುಚಪ್ಪಡಿ ಸೇತುವೆಗೆ ಬದಲಾಗಿ ಹೊಸ ಸೇತುವೆಯನ್ನು ಕಟ್ಟಲು ಸುಮಾರು 12.00 ಲಕ್ಷ ರೂ.ಗಳ ಅಂದಾಜು ಬರುತ್ತದೆ. ಈ ಕಾಮಗಾರಿಯನ್ನು 91–92ರ ಆಯವ್ಯಯದಲ್ಲಿ ಸೇರಿಸುವಂತೆ ಸೂಚನೆಗಳನ್ನು ನೀಡಲಾಗಿದೆ.

ವಿದ್ಯುತ್ ಮಂಡಳಿ ಬಗ್ಗೆ

399. ಶ್ರೀ ಹರ್ಷಕುಮಾರ ಗೌಡ (ಚಾಮರಾಜ):– ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಮೈಸೂರು ನಗರದಲ್ಲಿ ಸಮರ್ಪಕವಾದ ವಿದ್ಯುತ್ ಸರಬರಾಜು ಆಗದೆ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಇಲಾಖೆಯಲ್ಲಿ ಸಾಮಗ್ರಿಗಳ ಕೊರತೆಯಿಂದಾಗಿ ತೊಂದರೆಯಾಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ, ಹಾಗಿದ್ದಲ್ಲಿ ಸದರಿ ಕೊರತೆಯನ್ನು ನೀಗಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೆ?

ಇ) ಹೊಸ ಸ್ಟೇಷನ್‌ಗಳ ಸ್ಥಾಪನೆ ಮಾಡುವ ಸರ್ಕಾರದವರ ಉದ್ದೇಶವೇನಾದರೂ ಇದೆಯೆ?

ಶ್ರೀ ಎಸ್. ಬಂಗಾರಪ್ಪ, (ಮುಖ್ಯ ಮಂತ್ರಿಗಳು):–

ಅ) ಹೌದು.

ಆ) ವಿದ್ಯುತ್ ವಾಹಕ ಉತ್ಪಾದಕರು ನ್ಯಾಯಾಲಯದಲ್ಲಿ ವ್ಯಾಜ್ಯ ಹೂಡಿದ್ದರಿಂದ ಈ ವರ್ಷದ ಮೊದಲ ಕೆಲವು ತಿಂಗಳುಗಳಲ್ಲಿ ವಿದ್ಯುತ್ ವಾಹಕಗಳ ಕೊರತೆಯಾಗಿತ್ತು. ಈ ವ್ಯಾಜ್ಯವು ಇತ್ತೀಚೆಗೆ ಮಂಡಳಿಯ ಪರವಾಗಿ ತೀರ್ಮಾನವಾಗಿದ್ದು 1990–91ನೇ ವರ್ಷದಲ್ಲಿ ಹಾಕಿಕೊಂಡಿರುವ ಗುರಿಯನ್ನು ಸಾಧಿಸಲು ಬೇಕಾಗುವ ಎಲ್ಲಾ ಸಾಮಗ್ರಿಗಳನ್ನು ಒದಗಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಇ) ಗ್ರಾಹಕರುಗಳಿಗೆ ಉತ್ತಮ ಮಟ್ಟದಲ್ಲಿ ವಿದ್ಯುತ್ ಸರಬರಾಜು ಮಾಡುವ ಸಲುವಾಗಿ ಮಂಡಳಿಯು ಅಗತ್ಯವೆನಿಸಿದ ಸ್ಥಳಗಳಲ್ಲಿ ಹೊಸ ಸ್ಟೇಷನ್‌ಗಳನ್ನು ಹಂತಹಂತವಾಗಿ ಸ್ಥಾಪಿಸುವ ಕಾರ್ಯಕ್ರಮ ಹಾಕಿಕೊಂಡಿದೆ.